## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **08(193)** |
| ಸದಸ್ಯರ ಹೆಸರು | ಶ್ರೀ ಬಿ.ಎಂ. ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 04.12.2023 |
| ಉತ್ತರಿಸುವವರು | ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಾಕಷ್ಟು ಅರಣ್ಯ ಪ್ರದೇಶವೆಂದು ಗುರುತಿಸಲ್ಪಟ್ಟ ಪ್ರದೇಶಗಳು ದಟ್ಟ ಅರಣ್ಯಗಳಾಗಿದೇ, ಕುರುಚಲು ಗಿಡ-ಗಂಟೆ ಕಾಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ರಾಜ್ಯದಲ್ಲಿ ಪಶ್ಚಿಮಘಟ್ಟ ಪ್ರದೇಶವಿರುವ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಅತ್ಯಂತ ದಟ್ಟವಾದ ಕಾಡುಗಳನ್ನು ಹಾಗೂ ಮಧ್ಯಮ ದಟ್ಟವಾದ ಕಾಡುಗಳಿಂದ ಕೂಡಿರುತ್ತದೆ.<br><br>ಒಣ ಹವೆ ಪ್ರದೇಶಗಳಲ್ಲಿ ಕುರುಚಲು ಗಿಡ-ಗಂಟೆ ಇರುತ್ತದೆ. |
| ಆ) | ಇಂತಹ ಕುರುಚಲು ಅರಣ್ಯ ಪ್ರದೇಶಗಳಿರುವ ಮಧ್ಯ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಾಕಷ್ಟು ಪವನ ವಿದ್ಯುತ್ ಉತ್ಪಾದಿಸಲು ಸಂಭಾವ್ಯ ಇರುವುದನ್ನು ಸರ್ಕಾರದ ಗಮನಿಸಿರುವುದೇ? | ಇಂತಹ ಪ್ರದೇಶಗಳಲ್ಲಿ ಪವನ ವಿದ್ಯುತ್ ಉತ್ಪಾದಿಸಲು ಸಂಭಾವ್ಯತೆಯನ್ನು ಪರಿಶೀಲಿಸಿಕೊಂಡು ಅನುಮತಿಗಾಗಿ ಅರಣ್ಯ ಸಂರಕ್ಷಣಾ ಕಾಯ್ದೆ-1980ರಡಿ ಪರಿವೇಶ್ ಪೋರ್ಟಲ್ ಮುಖೇನ ಅರ್ಜಿ ಸಲ್ಲಿಸಿದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.<br><br>ಇಂತಹ ಯೋಜನೆಗಳಿಗೆ ಮುಂದಾಗಿರುವ ಅನೇಕ ಉದ್ದಿಮೆದಾರರುಗಳಿಗೆ ಈಗಾಗಲೇ ಚಿತ್ರದುರ್ಗ, ವಿಜಯನಗರ, ದಾವಣಗೆರೆ, ಗದಗ್, ಹಾಸನ, ತುಮಕೂರು, ಬೆಳಗಾವಿ, ಗೋಕಾಕ್, ಭದ್ರಾವತಿ, ಜಿಲ್ಲೆಗಳ ವ್ಯಾಪ್ತಿಯಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಅಡಿಯಲ್ಲಿ 45 ಯೋಜನೆಗಳಿಗೆ ಅನುಮತಿ ನೀಡಲಾಗಿರುತ್ತದೆ. |
| ಇ) | ದೊಡ್ಡ ಬೃಹತ್ ಮರಗಳಲ್ಲದೇ, ಪರಿಸರಕ್ಕೂ ಯಾವುದೇ ರೀತಿಯ ಹಾನಿಯಾಗದೆ ಇಂತಹ ಪ್ರದೇಶಗಳಲ್ಲಿ ಪವನ ವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಲು ಸರ್ಕಾರ ಮುಂದಾಗಬಹುದೇ; (ವಿವರನೀಡುವುದು) | |
| ಈ) | ಇಂತಹ ಯೋಜನೆಗಳಿಗೆ ಮುಂದಾಗಿರುವ ಅನೇಕ ಉದ್ದಿಮೆದಾರರುಗಳಿಗೆ ಅರಣ್ಯ ಇಲಾಖೆಯವರು ಅನುಮತಿ ನೀಡುವ ನಿಟ್ಟಿನಲ್ಲಿ ಸರ್ಕಾರದ ಉತ್ತೇಜನಾಕ್ರಮಗಳಾವುವು; ಕ್ಷಿಪ್ರ ಕಾರ್ಯಯೋಜನೆಗಳಾವುವು? (ಸಂಪೂರ್ಣ ಅಂಕಿಅಂಶಗಳೊಂದಿಗೆ ವಿವರ ನೀಡುವುದು) | |

ಸಂಖ್ಯೆ: ಅಪಜೀ 139 ಎಫ್ ಎ ಎಫ್ 2023

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.